**ಒ.ಎಸ್.ನಂಬ್ರಃ 75/2022** **ಪಿ.ಡಬ್ಲ್ಯೂ: 3**

ದಿನಾಂಕಃ 21-09-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಆರ್. ಎಚ್. ರವರಿಂದ

ದಾವಾ ಸ್ಥಳ 48 ಸೆಂಟ್ಸ್ ಇದ್ದು, ನಮ್ಮ ಮನೆಯಿಂದ ಸುಮಾರು ಅರ್ಧ ಕಿ.ಮೀ ದೂರ ಇದೆ. ದಾವಾ ಸ್ಥಳದ ಒಂದು ಗದ್ದೆಯ ನಂತರ ನನಗೆ ಸೇರಿದ ಜಾಗ ಇದೆ. ನಮ್ಮ ಜಾಗದಲ್ಲಿ ನಾನೇ ಬೇಸಾಯ ಮಾಡುತ್ತಿದ್ದೇನೆ. ದಾವಾ ಸ್ಥಳದ ಜಾಗದಲ್ಲಿ ವಾದಿಯ ಅಣ್ಣನ ಮಗ ಬೇಸಾಯ ಮಾಡುತ್ತಿದ್ದಾರೆ. ದಾವಾ ಸ್ವತ್ತಿನಲ್ಲಿ ಕಾಲು ದಾರಿ ಇದೆ. ದಾವಾ ಸ್ವತ್ತು ಬಯಲು ಪ್ರದೇಶದ ಮಧ್ಯದಲ್ಲಿ ಬರುತ್ತದೆ ಎಂದರೆ ಸರಿ. ಈಗ ಟಿಲ್ಲರ್ ಮೂಲಕ ಬೇಸಾಯ ಮಾಡಲಾಗುತ್ತದೆ. ಪ್ರತಿವಾದಿಯನ್ನು ನೋಡಿದ್ದೇನೆ, ಅವರ ಮನೆ ನಮ್ಮ ಮನೆಯಿಂದ ಒಂದೂವರೆ ಕಿ.ಮೀ ದೂರದಲ್ಲಿ ಇದೆ.

ಅನಂತ ಗಾಣಿಗರವರ ಗೇಣಿಯ ಚೀಟಿಯನ್ನು ನಾನು ನೋಡಿಲ್ಲ, ವಾದಿ ಹೇಳಿ ಗೊತ್ತಾಗಿರುತ್ತದೆ. ದಾವಾ ಸ್ವತ್ತಿನ ಮೂಲ ಮಾಲೀಕರು ಸಾವಿತ್ರಮ್ಮ. ಸಾವಿತ್ರಮ್ಮರವರ ಕುಟುಂಬದ ಬಗ್ಗೆ ನನಗೆ ಗೊತ್ತಿಲ್ಲ. ಖರೀದಿ ಮಾಡಿರುವ ವಿಚಾರ ವಾದಿ ಹೇಳಿ ಗೊತ್ತಾಗಿರುತ್ತದೆ ಎಂದರೆ ಸರಿ. ಗೋಪಾಲ ಗಾಣಿಗರವರು ತಮ್ಮನಿಗೆ ವ್ಯವಸ್ಥಾ ಪತ್ರ ಮಾಡಿರುವುದನ್ನು ನಾನು ನೋಡಿಲ್ಲ. ದಾವಾ ಸ್ವತ್ತಿನ ಪಹಣಿಯು ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ 2021 ಕೊನೆಯಲ್ಲಿ ಪ್ರತಿವಾದಿಯವರು ಪಹಣಿ ಪತ್ರಿಕೆಯ ಆಧಾರದ ಮೇಲೆ ಸ್ಥಳಗಳನ್ನು ಹುಡುಕುತ್ತಾ ಬಂದಿರುತ್ತಾರೆ ಎಂಬುದು ವಾದಿ ಹೇಳಿ ಗೊತ್ತಾಯಿತು.

ವಾದಿಯು ನಮ್ಮ ಮನೆಯ ಪಕ್ಕದವರಾಗಿರುವುದರಿಂದ ಸಾಕ್ಷಿ ನುಡಿಯುತ್ತಿದ್ದೇನೆ. ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಬೇಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ, ವಾದಿಯೇ ಮಾಡುತ್ತಿದ್ದರು. ದಾವಾ ಆಸ್ತಿ ಯು ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ವಾದಿಯವರ ಆಮೇಶದ ಮೇರೆಗೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಯಾವ ವಿಚಾರಗಳು ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಹಣಿಯ ಪ್ರಕಾರ ಪ್ರತಿವಾದಿಗಳ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇರುವುದಿಲ್ಲ

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**